ಸರ್ಕಾರಿ ಜಮೀನಿನ ಒತ್ತುವರಿಗೆ ತಡೆ

1176-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸರ್ಕಾರಿ ಗೋಮಾಳ, ಕೆರೆ ಅಂಗಳ, ಸ್ಮಶಾನಗಳ ಜಾಗದಲ್ಲಿ ಒತ್ತುವರಿಯಾಗಿರುವ ಜಮೀನು, ಎಷ್ಟು?

ಆ) ಅದನ್ನು ಬಿಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಒತ್ತುವರಿಯಾಗಿದೆ. (ವಿವರ ಒದಗಿಸುವುದು)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ಒಟ್ಟು 25,80,214 ಎಕರೆಗಳು (ಗೋಮಾಳ, ಕೆರೆ ಅಂಗಳ, ಸ್ಮಶಾನ ಹಾಗೂ ಇತರೆ ಎಲ್ಲ ವರ್ಗದ ಜಮೀನು ಸೇರಿ)

ಆ) ಗೋಮಾಳ ಜಮೀನನ್ನು ಸಕ್ರಮೀಕರಿಸಲು ಅವಕಾಶ ನೀಡಲಾಗಿದೆ.

ಕೆರೆ ಅಂಗಳ, ಸ್ಮಶಾನಗಳು ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನುಗಳ ಒತ್ತುವರಿಯನ್ನು ಒಕ್ಕಲೆಬ್ಬಿಸಲು ಈಗಾಗಲೇ ಸೂಕ್ತ ನಿರ್ದೇಶವನ್ನು ಎಲ್ಲಾ ಕಂದಾಯ ಅಧಿಕಾರಿಗಳಿಗೆ ನೀಡಲಾಗಿದೆ.

ಇ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಒತ್ತುವರಿಯಾಗಿರತಕ್ಕಂಥ ಜಮೀನು ಗೋಮಾಳ, ಕೆರೆ ಅಂಗಳ, ಸ್ಮಶಾನ ಮೂರು ಸೇರಿದಂತೆ 25,80,214 ಏಕರೆಗಳು. ಇದು ನಿಜವಾಗಲೂ ಬಹಳ ಭಯಭೀತಿ ಹುಟ್ಟಿಸತಕ್ಕಂಥ ವ್ಯವಸ್ಥೆ. ನಾನು ತಮ್ಮನ್ನು ಉತ್ತರವನ್ನುಕೊಟ್ಟಿರುವುದಕ್ಕೆ ಅಭಿನಂದಿಸುತ್ತೇನೆ ಆದರೆ ಒಂದು, 25 ಲಕ್ಷ ಜಿಲ್ಲರೆ ಏಕರೆ ಪ್ರದೇಶದ ಬೆಲೆ ಎಷ್ಟು ಎನ್ನುವುದು ಒಂದು. ಮತ್ತು ಎರಡನೆಯದು ಇದರಲ್ಲಿ ಸ್ಮಶಾನ ಜಾಗಗಳು, ಗೋಮಾಳ ಮತ್ತು ಕೆರೆ ಅಂಗಳ ಈ ಮೂರು ಸಾಮಾನ್ಯವಾಗಿ ಹಿಂದೆ ಮಿರ್ಜಾ ಸಾಹೇಬರಾಗಲಿ ಮತ್ತು ವಿಶ್ವೇಶ್ವರಯ್ಯನವರಾಗಲಿ, ಮಹಾರಾಜರಕಾಲ ಇವೆಲ್ಲ ಹಳ್ಳಿ ಹಳ್ಳಿಯಲ್ಲಿ ಗೋಮಾಳ ಇರಬೇಕು, ಸ್ಮಶಾನ ಇರಬೇಕು, ಕೆರೆ ಇರಬೇಕು ಎಂದು ಮಾಡಿರುವ ಒಂದು ವ್ಯವಸ್ಥೆ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಹೊಸ ದಿಕ್ಕಿಗೆ ಹೋಗುವಂಥ ಇದೆಲ್ಲವನ್ನು ಅಳಿಸಿಹಾಕಿ ಇದೆಲ್ಲವನ್ನು ಒತ್ತುವರಿ ಮಾಡಿ ಮಾಡಿರುವುದಕ್ಕೆ ಸರ್ಕಾರ ನಿರ್ದಿಷ್ಟವಾಗಿ ನೇರವಾಗಿ ಏನು ಕ್ರಮವನ್ನು ಕೈಗೊಳ್ಳುತ್ತದೆ? ಮತ್ತೊಂದು, ಪ್ರತಿ ಹಳ್ಳಿ ಹಳ್ಳಿಯಲ್ಲೂ ಕಡ್ಡಾಯವಾಗಿ ಸ್ಮಶಾನಗಳಿಗೆ ಜಾಗವನ್ನು ಮೀಸಲು ಇಡಬೇಕು. ಆ ಮೀಸಲಿಡತಕ್ಕಂಥ ವ್ಯವಸ್ಥೆಗೆ ತಮ್ಮಲ್ಲಿ ಜಾಗ, ಸ್ಥಳ ಇದೆಯೇ ಎನ್ನುವುದು ಒಂದು. ತಮಗೆ ಗೊತ್ತಿದೆ ಅನೇಕ ಕಡೆ ಶವಗಳನ್ನು ಸಂಸ್ಕಾರ ಮಾಡುವುದಕ್ಕೆ ಹೂಳುವುದಕ್ಕಾಗಿ ಪ್ರತಿ ಹಳ್ಳಿಗಳಲ್ಲಿ ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಮೂರು ಪ್ರಶ್ನೆಗಳನ್ನು ಕೇಳಿರುವುದರಿಂದ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ನೀಡಬೇಕೆಂದು ತಮ್ಮಲ್ಲಿ

ಅನುಬಂಧ

APPLICATIONS RECEIVED FOR REGULARICATION OF UNAUTHORISED CULTIVATION IN THE STATE AS ON 19-9-1991

Sl. No.	District	No. of Applications	Extent (in acres)	No.of SC/ST	Extent (in acres)
1.	Bangalore (Urban)	23,194	30,442.04	11,503	11,033.00
2.	Bangalore (Rural)	56,180	1,04,536.21	19,361	35,217.34
3.	Shimoga	11,34,706	3,66,395.37	33,690	79,951.10
4.	Chitradurga	60,878	1,74,021.31	37,444	1,05,758.11
5.	Tumkur	90,206	2,14,610.12	31,417	76,778.30
6.	Kolar	87,712	1,89,911.17	35,511	77,343.37
7.	Mysore	75,934	1,70,899.04	24,388	57,881.16
8.	Mandya	52,914	90,594.03	6,638	11,389.08
9.	Hassan	99,834	1,64,019.07	21,607	32,420.25
10.	Chikkamagalur	64,733	1,87,765.26	16,071	43,680.21
11.	Kodagu	14,612	33,671.15	1,900	4,652.15
12.	Mangalore	1,60,216	3,58,058.02	19,151	40,045.02
13.	Belgaum	10,853	37,864.18	5,588	17,232.01
14.	Karwar	37,869	20,375.00	3,105	4,715.00
15.	Bijapur	6,055	25,457.01	3,754	15,233.39
16.	Dharwar	28,727	98,393.34	10,831	40,038.11
17.	Gulbarga	24,907	83,233.37	15,025	51,425.36
18.	Bidar	11,780	45,333.07	7,562	28,336.08
19.	Bellary	30,849	90,329.07	17,911	53,257.11
20.	Raichur	15,056	44,246.12	9,105	28,542.38
	Total	**10,86,826**	**25,80,214.05**	**3,31,562**	**8,14,935.14**

ಕೋರುತ್ತಾ, ಅದಾದ ನಂತರ ಮತ್ತೆ ಅವಕಾಶ ಕೊಟ್ಟರೆ ಮತ್ತೊಂದು ಪ್ರಶ್ನೆ ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು: ಮಾನ್ಯ ಸಚಿವರೆ, I have one supplimentary.

ತಾವು ಗೋಮಾಳ, ಕೆರೆ ಅಂಗಳ ಮತ್ತು ಸ್ಮಶಾನಕ್ಕೆ ಸಂಬಂಧಿಸಿದಂತೆ, ಮೂರೂ ವಿಷಯಗಳನ್ನು ಒಟ್ಟಾಗಿ ಸೇರಿಸಿ ಉತ್ತರ ಕೊಟ್ಟಿದ್ದೀರಿ. ಆದುದರಿಂದ, ಇದನ್ನು ವರ್ಗೀಕರಿಸಿ ಕೆರೆ ಅಂಗಳ ಎಷ್ಟು ಒತ್ತುವರಿಯಾಗಿದೆ? ಸ್ಮಶಾನ ಭೂಮಿ ಎಷ್ಟು ಒತ್ತುವರಿಯಾಗಿದೆ? ಮತ್ತು ಗೋಮಾಳ ಜಮೀನು ಎಷ್ಟು ಒತ್ತುವರಿಯಾಗಿದೆ? ಎಂಬ ವಿವರ ಕೊಡಿ.

ಶ್ರೀ ಆರ್.ಎಲ್. ಜಾಲಪ್ಪ: ಅಧ್ಯಕ್ಷರೇ, ಆ ಪ್ರತ್ಯೇಕ ವಿವರಗಳು ಈಗ ಇಲ್ಲ. ಗೋಮಾಳ ಜಮೀನು ಎಷ್ಟು ಒತ್ತಾವರಿಯಾಗಿದೆ, ಇದಕ್ಕೆ ಯಾರ್ಯಾರು ಅರ್ಜಿಗಳನ್ನು ಸಲ್ಲಿಸಿದ್ದಾರೋ ಅದನ್ನೆಲ್ಲಾ ಪರಿಶೀಲಿಸುತ್ತಿದ್ದೇವೆ. ಅವರೆಲ್ಲಾ ಫಾರಂ ನಂಬರ್ 50ನ್ನು ಕೊಟ್ಟಿದ್ದಾರೆ. ಆದರೆ, ಎಲ್ಲೆಲ್ಲಿ ತಮ್ಮ ಜಮೀನು ಸ್ಮಶಾನದ ಜಮೀನಿಗೆ, ಕೆರೆ ಅಂಗಳಕ್ಕೆ ಮತ್ತು ಅರಣ್ಯ ಜಮೀನಿಗೆ ಒತ್ತುವರಿಯಾಗಿದೆ, ಹಾಗೆ ಸಲ್ಲಿಸಿರುವ ಅರ್ಜಿಗಳಲ್ಲಿ ಬಹಳಷ್ಟನ್ನು ರದ್ದುಗೊಳಿಸಿದ್ದು, ಒಂದೆರಡು ಕಡೆ ಅದನ್ನು ರಿಪ್ಲೇಸ್ ಮಾಡಿರುವುದು ಕೂಡ ನಮ್ಮ ಗಮನಕ್ಕೆ ಬಂದಿರುವುದರಿಂದ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ಎರಡನೆಯದಾಗಿ, ಮಾನ್ಯ ಸದಸ್ಯರು ಮಾತನಾಡುತ್ತಾ ಇದಕ್ಕೆ ಹಣ ಎಷ್ಟಾಗಬಹುದು? ಎಂದು ಕೇಳಿರುವುದಕ್ಕೆ ಅದರ ಅಂಕಿ-ಅಂಶ ನನ್ನ ಹತ್ತಿರ ಇಲ್ಲವಾದ್ದರಿಂದ ಕ್ಷಮಿಸಬೇಕು. ಅದನ್ನು ಲೆಕ್ಕ ಹಾಕುವುದು ಸ್ವಲ್ಪ ಕಷ್ಟವಾಗಬಹುದು. ಅದನ್ನು ನಾವು ಯಾವಾಗ ಲೆಕ್ಕ ಹಾಕಬಹುದೆಂದರೆ ಇದಕ್ಕಾಗಿ ರಚಿಸಿರುವ ಸಮಿತಿಗಳಲ್ಲಿ ಎಲ್ಲಾ ಆಖೈರಾಗಿ ತೀರ್ಮಾನವಾದ ನಂತರ ಎಷ್ಟು - ಯಾವ್ಯಾವ ಜಮೀನು ಒತ್ತುವರಿಯಾಗಿದೆಯೆಂಬುದು ತಿಳಿದು ಬರುತ್ತದೆ, ಆಗ ಅದರ ಬಗ್ಗೆ ಕ್ರಮ ಕೈಗೊಂಡು ಲೆಕ್ಕಹಾಕಬಹುದು.

ಇನ್ನೊಂದು ಬಹಳ ಮುಖ್ಯವಾದ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದು, ಅದರ ಕುರಿತು ಹೇಳುವುದಾದರೆ ನಮ್ಮ ಪ್ಲಾನಿಂಗ್ ಪರಿಸ್ಥಿತಿಯೇ ಈ ಸ್ಥಿತಿಗೆ ಬಂದಿದೆ. ಹಿಂದೆ ಪ್ರತಿಯೊಂದು ಹಳ್ಳಿಯಲ್ಲೂ ರುದ್ರಭೂಮಿ ಇರುತ್ತಿತ್ತು. ಈಗ ರುದ್ರಭೂಮಿ ಇಲ್ಲವೆಂದು ಹೇಳುತ್ತಿರುವುದು ನಿಜ. ಅದಕ್ಕೋಸ್ಕರ ರುದ್ರಭೂಮಿ ಇಲ್ಲದಿದ್ದರೆ ಜಮೀನು ಖರೀದಿಸುವುದಕ್ಕಾಗಿ ಪ್ರತಿಯೊಂದು ವಿಭಾಗಕ್ಕೂ 25 ಲಕ್ಷ ರೂಪಾಯಿಗಳಂತೆ ನಾಲ್ಕು ವಿಭಾಗಗಳಿಗೆ ಒಟ್ಟು ಒಂದು ಕೋಟಿ ರೂಪಾಯಿಗಳನ್ನು ಆಯ-ವ್ಯಯದಲ್ಲಿ ಇಟ್ಟಿದ್ದೇವೆ. ರಾಜ್ಯದ ಯಾವ್ಯಾವ ಸ್ಥಳಗಳಲ್ಲಿ ರುದ್ರಭೂಮಿಗೋಸ್ಕರ ಜಮೀನು ಖರೀದಿಸಬೇಕೆಂದು ನಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಮತ್ತು ಈಗಾಗಲೇ ಜಮೀನು ಒತ್ತುವರಿ ಯಾಗಿರುವುದನ್ನು ಯಾವ ರೀತಿ ಬಿಡಿಸುತ್ತೀರಿ? ಎಂದು ಸದಸ್ಯರು ಕೇಳಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಈಗಾಗಲೇ ಈ ಕೆಲಸ ಪ್ರಾರಂಭಿಸಿದ್ದು, ಇತರ ಜಿಲ್ಲೆಗಳಲ್ಲಿ ಎಲೆಲ್ಲಿ ಕೆರೆ ಅಂಗಳ ಜಮೀನು, ಸ್ಮಶಾನ ಭೂಮಿ, ದೇವಸ್ಥಾನದ ಭೂಮಿ ಒತ್ತುವರಿಯಾಗಿದೆಯೋ ಅದನ್ನು ಕೂಡಲೇ ಬಿಡಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ಕೊಟ್ಟಿದ್ದೇವೆ. ಎರಡನೆಯದಾಗಿ, 1990ನೇ

ಇಸವಿಯಿಂದ ಇತ್ತೀಚೆಗೆ ಗೋಮಾಳ ಜಮೀನು ಏನಾದರೂ ಒತ್ತುವರಿಯಾಗಿದ್ದರೆ ಅದನ್ನೂ ಬಿಜಿಸಬೇಕೆಂದು ಸೂಚನೆ ಕೊಡಲಾಗಿದೆ. ಈ ದಿಸೆಯಲ್ಲಿ ನಾನು ಯೋಚನೆ ಮಾಡುತ್ತಿರುವುದೇನೆಂದರೆ, ಅದನ್ನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ 1984ರಲ್ಲಿ ಜಾರಿಗೆ ತಂದ ಗೂಂಡಾ ವಿರೋಧಿ ಕಾನೂನನ್ನು ಈ ವಿಚಾರದಲ್ಲಿ ಜಾರಿಗೊಳಿಸಲು ಸಾಧ್ಯವಾಗುತ್ತದೆಯೇ? ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಆ ಕಾನೂನಿನಲ್ಲಿ ಸ್ಲಮ್‌ಗ್ರಾಬರ್ಸ್ ಎಂದು ಇದೆ. ಸರ್ಕಾರಿ ಜಮೀನನ್ನು ಏನಾದರೂ ಗ್ರಾಬ್ ಮಾಡಿದರೂ ಕೂಡ ಸಂಬಂಧಿಸಿದವರ ಮೇಲೆ ಇದನ್ನು ಜಾರಿಗೊಳಿಸಬಹುದಾಗಿದೆ ಎಂದು ಕಾನೂನು ತಜ್ಞರು ನನಗೆ ಸಲಹೆ ಕೊಟ್ಟಿದ್ದಾರೆ. ಹೀಗೆ ಎಲ್ಲೆಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಸರ್ಕಾರದ ಯಾವುದೇ ವಿಧವಾದ ಅನುಮತಿ ಪಡೆದುಕೊಳ್ಳದೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಶುರು ಮಾಡಿದ್ದಾರೋ, ಅಂತಹವರು ಆ ಜಮೀನುಗಳನ್ನು ಉಪಯೋಗಿಸಿಕೊಳ್ಳದಂತೆ ಅವರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸುವುದಕ್ಕೂ ನಾವು ಹಿಂದೆ-ಮುಂದೆ ನೋಡುವುದಿಲ್ಲವೆಂಬ ವಿಷಯವನ್ನು ಸದನದ ಗಮನಕ್ಕೆ ತಮ್ಮ ಮೂಲಕ ತರಲು ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಕ್ರಮ ತೆಗೆದುಕೊಳ್ಳುತ್ತಿರುವುದರ ಬಗ್ಗೆ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಬಿಡಿಸುವುದಕ್ಕೆ ಎಷ್ಟು ದಿವಸದೊಳಗಾಗಿ ವ್ಯವಸ್ಥೆ ಮಾಡುತ್ತೀರಿ? ಎರಡನೆಯದಾಗಿ, ಕನಿಷ್ಠ ಒಂದು ತಿಂಗಳೊಳಗಾಗಿ ಇಡೀ ರಾಜ್ಯಾದ್ಯಂತ ಪ್ರತಿ ಹಳ್ಳಿಗಳಲ್ಲೂ ತಾವು ನಿರ್ದಿಷ್ಟವಾದ ವ್ಯವಸ್ಥೆ ಮಾಡಲಿಲ್ಲವೆಂದರೆ ನಾವು ಬೇರೆ ವಿಧಿಯಿಲ್ಲದೆ ಹೆಣಗಳನ್ನು ಸಂಸ್ಕಾರ ಮಾಡುವುದಕ್ಕೆ ವಿಧಾನಸೌಧದ ಮುಂದೆ ತರಬೇಕಾಗುತ್ತದೆ. ಇದು ಹಾಸ್ಯವಲ್ಲ. ಇದು ಸ್ಪಷ್ಟ. ನಾನು ಆ ಕಾರ್ಯ ಮಾಡುತ್ತೇನೆ. ಇದಕ್ಕೆ ತಾವು ಏನು ಹೇಳುತ್ತೀರಿ.

ಶ್ರೀ ಆರ್.ಎಲ್. ಜಾಲಪ್ಪ: ನಾನು ಈಗಾಗಲೇ ತಿಳಿಸಿರುವಂತೆ ಇದಕ್ಕಾಗಿಯೇ ಆಯ-ವ್ಯಯದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಇಡಲಾಗಿದ್ದು, ರುದ್ರಭೂಮಿ ಇಲ್ಲದಿದ್ದರೆ, ಸ್ವಾಧೀನಪಡಿಸಿಕೊಳ್ಳುವುದಲ್ಲ ಅದಕ್ಕಾಗಿ ಜಮೀನನ್ನೇ ಖರೀದಿಸಬೇಕೆಂದು ನಾವು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಎಲ್ಲೆಲ್ಲಿ ಸ್ಮಶಾನಕ್ಕಾಗಿ ಭೂಮಿ ಕೊರತೆಯಿದೆ ಎಂದು ಹೇಳಿದರೆ ಅಲ್ಲಿ ತಕ್ಷಣವೇ ಒಂದು ಎಕರೆಯಷ್ಟು ಭೂಮಿ ಖರೀದಿಸಲು ನಾನು ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮುಖಾಂತರ ತಿಳಿಸುತ್ತೇನೆ. ಒಂದು ವೇಳೆ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಅವರು ಜಮೀನನ್ನು ಖರೀದಿಸದೆ ಹೋದರೆ, ತಾವು ಹೆಣವನ್ನು ವಿಧಾನಸೌಧದ ಮುಂದೆ ತಂದು ಸಂಸ್ಕಾರ ಮಾಡುವುದಾಗಿ ಏನು ಹೇಳಿದಿರಿ, ನಾನೂ ಸಹ ತಮ್ಮ ಜೊತೆ ಹೆಣದ ಸಂಸ್ಕಾರಕ್ಕೆ ಬರುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ: ಅಧ್ಯಕ್ಷರೆ, ಹೆಣಗಳನ್ನು ಹೊತ್ತುಕೊಂಡು ವಾಟಾಳ್ ನಾಗರಾಜರವರು ವಾದ್ಯಸಂಗೀತ ಜೊತೆ ಬರುತ್ತಾರೋ? ಇಲ್ಲವೇ ಹೇಗೆ ತರುತ್ತಾರೆ?

ಶ್ರೀ ಆರ್.ಎಲ್. ಜಾಲಪ್ಪ: ಇದು ನಮ್ಮ ಯೋಜನೆಯ ದೌರ್ಬಲ್ಯ. ಮೊದಲು ಗುಂಡು ತೋಪುಗಳಿರುತ್ತಿದ್ದವು, ಇವೊತ್ತಿನ ದಿವಸ ಅದು ಇಲ್ಲದ ಸ್ಮಶಾನ ಭೂಮಿ, ಕೆರೆ ಅಂಗಳದ

ಜಮೀನುಗಳೆಲ್ಲಾ ಒತ್ತುವರಿಯಾಗಿದೆ. ಇದೆಲ್ಲವೂ ನಾವೇ ಮಾಡಿಕೊಂಡು ಬಂದಿರುವ ದುರಾದೃಷ್ಟ.

ಶ್ರೀ ಕೆ.ಎನ್. ನಾಗೇಗೌಡ: ಒಂದು ಗಂಭೀರವಾದ ವಿಚಾರವನ್ನು ಹಿರಿಯ ಸಚಿವರಾದ ಜಾಲಪ್ಪನವರು ಜ್ಞಾಪಿಸಿಕೊಳ್ಳಬೇಕು. ಏಕೆಂದರೆ, ಅವರು ಹಳ್ಳಿಗಾಡಿನಲ್ಲಿ ವಾಸಿಸುತ್ತಿರುವವರು, ಅಲ್ಲಿಯೇ ಬಹಳ ವರ್ಷಗಳಿಂದ ಬದುಕಿಕೊಂಡು ಬಂದಿರುವವರಾದ್ದರಿಂದ ಸ್ಮಶಾನದ ಭೂಮಿ ವಿಚಾರದಲ್ಲಿ ಹೇಳುವುದಾದರೆ, ಇವೊತ್ತು ನಾವೇನಾದರೂ ಹಳ್ಳಿಗಳಿಗೆ ಹೋದಾಗ ಈ ಕುರಿತು ಬೇಕಾದಷ್ಟು ವ್ಯಾಜ್ಯಗಳಾಗಿರುವುದು ನಿಮ್ಮ ಕಣ್ಣೆದುರೇ ಉಳಿದಿದೆ. ತಾವು ಈ ಸಂಬಂಧದಲ್ಲಿ ಸುತ್ತೋಲೆಗಳನ್ನು ಹೊರಡಿಸಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ, ಸುತ್ತೋಲೆ ಹೊರಡಿಸಿ ರುದ್ರಭೂಮಿಗೋಸ್ಕರ ಭೂಮಿಯನ್ನು ಖರೀದಿಸಿ ಎಂತಲೂ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೀರಿ. ಅದನ್ನೂ ಒಪ್ಪುತ್ತೇನೆ. ಆದರೆ, ಭೂಮಿ ಖರೀದಿಸಲು ಎಕರೆಗೆ 30,000-40,000 ರೂಪಾಯಿಗಳನ್ನು ಕೊಟ್ಟರೆ ಇವೊತ್ತಿನ ಕಾಲದಲ್ಲಿ ರುದ್ರಭೂಮಿಗೋಸ್ಕರ ಯಾವ ಊರಿನಲ್ಲಿ ಯಾರು ತಾನೆ ಜಮೀನು ಕೊಡುತ್ತಾರೆ? ಬೆಂಗಳೂರಿನ ಪಕ್ಕದ ಊರಿನಲ್ಲಿರುವ ಜಮೀನಿನ ಬೆಲೆ ಎಕರೆಗೆ 4ರಿಂದ 5 ಲಕ್ಷ ರೂಪಾಯಿಗಳ ಮೌಲ್ಯವಿರುವಾಗ, ಅಲ್ಲದೆ ಮಂಡ್ಯದಲ್ಲೂ ಎಕರೆಗೆ 2 ಲಕ್ಷ ರೂಪಾಯಿಗಳಿರುವಾಗ ಸ್ಮಶಾನಕ್ಕಾಗಿ ಭೂಮಿ ಖರೀದಿಸಿ ಎಂದು ಎಕರೆಗೆ 30,000-40,000 ರೂಪಾಯಿಗಳಂತೆ ಕೊಟ್ಟರೆ ಯಾವ ಜಿಲ್ಲಾಧಿಕಾರಿಗಳಿಗೆ ಜಮೀನು ಕೊಡುತ್ತಾರೆ? ಬಹಳಷ್ಟು ಹಳ್ಳಿಗಳಲ್ಲಿ ಸ್ಮಶಾನವೇ ಇಲ್ಲವಾದ್ದರಿಂದ, ಈ ಕುರಿತು ನಾನು ಒಂದು ಸಲಹೆ ಏನು ಕೊಡುತ್ತೇನೆಂದರೆ, ಇದನ್ನು ಅತಿ ಆದ್ಯತೆ ಮೇಲೆ ತೆಗೆದುಕೊಂಡು ಯಾವ್ಯಾವ ಹಳ್ಳಿಗಳಲ್ಲಿ ಸ್ಮಶಾನಗಳಿಲ್ಲವೋ ಗುರ್ತಿಸಿ ಅಲ್ಲಿ ಕಡ್ಡಾಯವಾಗಿ ಸಮೀಕ್ಷೆ ಮಾಡಿ, ಇಂತಿಷ್ಟು ತಿಂಗಳೊಳಗೆ ಇಂತಿಷ್ಟು ಹಳ್ಳಿಗಳಿಗೆ ಸ್ಮಶಾನ ಜಮೀನನ್ನು ನಿಗದಿಮಾಡಿ ಸರ್ಕಾರ ಆದೇಶ ಹೊರಡಿಸಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ನಾಗೇಗೌಡರು ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದ್ದು ಅದು ಸಚಿವರ ಗಮನಕ್ಕೆ ಬಂದಿದೆಯೆಂದು ತಿಳಿದುಕೊಂಡಿದ್ದೇನೆ. ನಾವು ಏನು ತಪ್ಪು ಮಾಡುತ್ತಿದ್ದೇವೆಂದರೆ, ಒಂದು ಕಡೆ ಗೋಮಾಳ, ಗುಂಡುತೋಪು, ಕೆರೆ ಅಂಗಳ ಮತ್ತು ಸ್ಮಶಾನಕ್ಕಾಗಿ ಕಾಯ್ದಿಟ್ಟ ಜಮೀನು ಏನಿದೆ, ಮೊದಲು ದರ್ಖಾಸ್ತು ಸಮಿತಿಯಲ್ಲಿ ಗುಂಡುತೋಪನ್ನು ಹೊರತುಪಡಿಸಿ ಗೋಮಾಳ ಜಮೀನನ್ನು ಮಂಜೂರು ಮಾಡುತ್ತಿದ್ದರು. ಅದನ್ನು ಮಂಜೂರು ಮಾಡಿ ಮತ್ತೆ ಸ್ವಾಧೀನಪಡಿಸಿಕೊಳ್ಳುವುದು. ಇದಕ್ಕೆ ಹಣ ಕೊಡದಿರುವ ಸರ್ಕಾರ ಈ ಕೆಲಸವನ್ನು ನಿಲ್ಲಿಸುವ ಬದಲು ಸರ್ಕಾರಿ ಜಮೀನು ಏನಿದೆ, ಹಳ್ಳಿಗಳು ಮುಂದಿನ ನೂರು ವರ್ಷಗಳಲ್ಲಿ ಏನಾಗಬಹುದು ಎಂಬುದನ್ನು ಆಲೋಚಿಸಿ. ಇವೊತ್ತು 'ಆಶ್ರಯ' ಯೋಜನೆಯಡಿ ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೋಸ್ಕರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆ. ಅದರ ಬದಲು ಸರ್ಕಾರಕ್ಕೆ ಸಂಬಂಧಿಸಿದ ಗುಂಡುತೋಪು, ಗೋಮಾಳ ಮುಂತಾದ ಜಮೀನು ಯಾವುದಿದೆ, ಅದು ಸಂಪೂರ್ಣವಾಗಿ ಸರ್ಕಾರದ ಸುಪರ್ದಿಯಲ್ಲಿದ್ದರೆ ಸರ್ಕಾರದ ಕೆಲಸಕ್ಕೆ ಹಾಗೂ ಸಾರ್ವಜನಿಕರ ಕೆಲಸಕ್ಕಾಗಿ ಉಪಯೋಗವಾಗುತ್ತದೆ. ಇದುವರೆಗೂ ಏನೇನು ಕೆಲಸಗಳಾಗಿವೆಯೋ ಅದನ್ನೆಲ್ಲಾ ಬಿಟ್ಟು

ಈಗ ಸರ್ಕಾರಿ ಜಮೀನು ಎಷ್ಟಿವೆಯೋ ಅಷ್ಟನ್ನೂ ಕಾಯ್ದಿರಿಸಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ: ಇದೊಂದು ಉತ್ತಮವಾದ ಸಲಹೆಯಾಗಿರುವುದರಿಂದ ಒಪ್ಪಿಕೊಳ್ಳತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದರೆ, ಪ್ರತಿಯೊಂದು ಹಳ್ಳಿಗೂ ಕೂಡ ಒಂದು ಯೋಜನೆ ಇರಬೇಕು. ಮುಂದಿನ ವರ್ಷಗಳಲ್ಲಿ ಅವು ಹೇಗಾಗಬಹುದೆಂಬುದನ್ನು ತಿಳಿಸಿದ್ದಾರೆ. ಇದೊಂದು ಉತ್ತಮ ಸಲಹೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆಯವರು ಮಾಡುತ್ತಾರೋ, ಇಲ್ಲವೇ ಕಂದಾಯ ಇಲಾಖೆಯವರು ಮಾಡುತ್ತಾರೋ ಮಾಡಲಿ. ಏಕೆಂದರೆ, ಈ ದೇಶದಲ್ಲಿ ವ್ಯಕ್ತಿ ಜೀವಂತವಿದ್ದಾಗಲೂ ಚಿಂತೆ ಇರುತ್ತದೆ, ಮತ್ತು ಶೋಷಣೆಗೊಳಗಾಗುವುದರ ಜೊತೆಗೆ ಜಾತೀಯತೆಯಂತೂ ಇದ್ದೇ ಇರುತ್ತದೆ. ವ್ಯಕ್ತಿ ಸತ್ತ ನಂತರವೂ ಹಾಗೆಯೇ ಮುಂದುವರಿದಿದೆ. ಎಷ್ಟೋ ಕಡೆಯ ಹಳ್ಳಿಗಳಲ್ಲಿ ಒಂದು ಜಾತಿಗೆ ಸೇರಿದ ವ್ಯಕ್ತಿ ಸತ್ತರೆ ಶವ ಸಂಸ್ಕಾರಕ್ಕಾಗಿ ಮತ್ತೊಂದು ಜಾತಿಯವರಿಗಾಗಿ ಇರುವ ಸ್ಮಶಾನಕ್ಕೆ ತಂದರೆ 'ನಿಮ್ಮ ಹೆಣವನ್ನು ನಮ್ಮ ಕಡೆ ತಂದು ಸಂಸ್ಕಾರ ಮಾಡಬೇಡಿ' ಎನ್ನುತ್ತಾರೆ. ಪರಿಸ್ಥಿತಿ ಹೀಗಿದ್ದಾಗ, ಕೆಲವು ಸಂದರ್ಭದಲ್ಲಿ ಈ ಸಂಬಂಧವಾಗಿ ವ್ಯಾಜ್ಯವುಂಟಾಗಿ ಹೆಣವನ್ನು ಜಿಲ್ಲಾಧಿಕಾರಿಗಳವರ ಬಳಿ ಹೊತ್ತುಕೊಂಡು ಹೋಗಿ, ಕೊನೆಗೆ ರಾತ್ರಿ 12.00 ಗಂಟೆಯ ಸಮಯದಲ್ಲಿ ಮಣ್ಣುಮಾಡಿದಂಥ ಉದಾಹರಣೆಗಳೂ ಕೂಡ ಇವೆ. ಮಾನ್ಯ ಸದಸ್ಯರಾದ ನಾಗೇಗೌಡರು ಇರುವ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಇಂತಹುದೇ ಒಂದು ಗಂಭೀರ ಪರಿಸ್ಥಿತಿ ಉದ್ಭವವಾಗಿತ್ತು. ಆದುದರಿಂದ, ಈ ದಿಸೆಯಲ್ಲಿ ತಾವು ಸಂಪೂರ್ಣವಾಗಿ ಆಲೋಚಿಸಿ ಪ್ರತಿ ಹಳ್ಳಿಯಲ್ಲೂ ಒಂದು ಸ್ಮಶಾನಕ್ಕೆ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ಸಂಬಂಧಿಸಿದ ಅಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ಕೊಡಿಸಬೇಕು. ಏಕೆಂದರೆ, ಕನಿಷ್ಠ ಪಕ್ಷ ಸತ್ತವರಿಗಾದರೂ ಸಮಾನತೆ ಇರಬೇಕಲ್ಲವೆ? ಮಾನ್ಯ ಸದಸ್ಯರು ಸಲಹೆ ಕೊಟ್ಟಿರುವಂತೆ ಕ್ರಮ ತೆಗೆದುಕೊಳ್ಳಿ ಇಲ್ಲದಿದ್ದರೆ ಹೆಣಗಳನ್ನು ಹೂಳುವುದಕ್ಕೂ ಕೂಡ ಆ ಜಾತಿ, ಈ ಜಾತಿ ಎಂಬ ಬೇಧವುಂಟಾಗುವುದರಿಂದ ಎಲ್ಲಾ ಹೆಣಗಳನ್ನು ಹೂಳಲು ಹತ್ತು ಸ್ಮಶಾನಗಳನ್ನು ಮಾಡಿ ಇರುವ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಇದಕ್ಕೆ ತಾವು ಯಾವಾಗ ಆದೇಶ ಕೊಡುತ್ತೀರಿ? ಹೇಗೆ ಮಾಡುತ್ತೀರಿ? ಎಂಬುದನ್ನು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು: ಇದರ ಬಗ್ಗೆ ಒಂದೇ ಸಲ ತಾವು ಕಂದಾಯ ಸಚಿವರುಗಳ ಜೊತೆ ಕುಳಿತು ಸಮಗ್ರವಾಗಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸಂಖ್ಯೆ

952- ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ